Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary

Volume 39 | Issue - 15 | 10th October 2024

ವಿಷಯ :

## ಸಮುದಾಯ ಆರೋಗ್ಯ ಮತ್ತು ನಾವು

ಮುಖ್ಯ ಅತಿಥಿ:

**ಡಾ|| ರಂಗನಾಥ ವೈ. ಪಿ.,**

ವೈದ್ಯಾಧಿಕಾರಿ

ಪ್ರಾಥಮಿಕ ಆರೋಗ್ಯ ಕೇಂದ್ರ ಹಟ್ಟಿಯಂಗಡಿ

**Time : 7.00 p.m.**

**Venue : Hotel Shivaprasad Grand, Kundapura**

**39th year of Service and Fellowship**



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

# ಸಂಪಾದಕೀಯ.... :



ಎಲ್ಲರಿಗೂ ನಮಸ್ಕಾರ,

ಒಂದು ಪುಟ್ಟ ಹಳ್ಳಿ. ಅಲ್ಲಿನ ಜನರು ಚಪ್ಪಲಿ ಧರಿಸುತ್ತಿರಲಿಲ್ಲ ಹಾಗೂ ಚಪ್ಪಲಿಗಳನ್ನು ಕಂಡೂ ಇರಲಿಲ್ಲ. ಆಗ ಒಬ್ಬರು ಚಪ್ಪಲಿ ವ್ಯಾಪಾರಿಗೆ ಆ ಹಳ್ಳಿಯಲ್ಲಿ ಒಂದು ಚಪ್ಪಲಿ ಅಂಗಡಿಯನ್ನು ಹಾಕಲು ಸಲಹೆಯನ್ನು ನೀಡುತ್ತಾರೆ. ಆಗ ಅವನು "ಆ ಹಳ್ಳಿಯಲ್ಲಿ ಚಪ್ಪಲಿಯ ಬಗ್ಗೆ ಅರಿವಿಲ್ಲದ ಜನರು ಇರುವಾಗ ನನ್ನ ವ್ಯಾಪಾರ ಹೇಗೆ ಕುದುರೀತು?" ಎಂದು ಯೋಚಿಸುತ್ತಾನೆ. ಆದರೆ ಇನ್ನೊಬ್ಬ ವ್ಯಾಪಾರಿಯು "ಅಲ್ಲಿ ಯಾವುದೇ ಚಪ್ಪಲಿ ಅಂಗಡಿ ಇಲ್ಲ ಹಾಗಾಗಿ ನನಗೆ ಸಂಪೂರ್ಣ ವ್ಯಾಪಾರವಾಗುತ್ತದೆ" ಎಂಬ ಧನಾತ್ಮಕ ಯೋಚನೆಯಿಂದ ಅಲ್ಲಿ ಚಪ್ಪಲಿ ಅಂಗಡಿ ಹಾಕುತ್ತಾನೆ. ಅಲ್ಲಿನ ಜನರಿಗೆ ಚಪ್ಪಲಿ ಧರಿಸುವ ಬಗ್ಗೆ ಅರಿವು ಮೂಡಿಸಿ ಅದರ ಪ್ರಯೋಜನಗಳನ್ನು ತಿಳಿಸಿ ಎಲ್ಲರೂ ಚಪ್ಪಲಿ ಧರಿಸುವಂತೆ ಪ್ರೇರೇಪಿಸುತ್ತಾನೆ. ಇದರಿಂದ ಆ ಊರಿನ ಜನರೆಲ್ಲರೂ ಚಪ್ಪಲಿಗಳನ್ನು ಖರೀದಿಸಿ ತೊಡಲಾರಂಭಿಸುತ್ತಾರೆ. ಆ ವ್ಯಾಪಾರಿ ಕೆಲವೇ ತಿಂಗಳುಗಳಲ್ಲಿ ಪ್ರಖ್ಯಾತ ಚಪ್ಪಲಿ ಕಂಪನಿಯ ಮಾಲೀಕನಾಗುತ್ತಾನೆ.

ಈ ಕಥೆಯನ್ನು ಹಲವರು ಕೇಳಿರಬಹುದು. ಇದು ಬೇರೆ ಯಾವುದೇ ಕಂಪನಿ ಅಲ್ಲ ಪ್ರಖ್ಯಾತ BATA ಕಂಪನಿ. ಧನಾತ್ಮಕ ಚಿಂತನೆ ಹಾಗೂ ನಮ್ಮ ಗುರಿಯ ಬಗ್ಗೆ ನಿಶ್ಚಿತ ನಿಲುವು ಹೊಂದಿದ್ದರೆ ನಮ್ಮ ಅಭಿವೃದ್ಧಿ ಸಾಧ್ಯ. ಇಂತಹ ಪ್ರಚೋದನಕಾರಿ ಪ್ರೇರಣಾತ್ಮಕ ವಿಷಯಗಳನ್ನು ಯುವಜನತೆಗೆ ಹಾಗೂ ಸ್ವ ಉದ್ಯೋಗಿಗಳಿಗೆ ತಿಳಿಸಿ ಅವರಿಗೆ ಉದ್ಯೋಗಾವಕಾಶದ ಬಗ್ಗೆ ಅರಿವು ಮೂಡಿಸುವುದರಿಂದ ನಿರುದ್ಯೋಗ ಹಾಗೂ ಬಡತನದ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯ.




ರೋಟರಿಯ ಅಕ್ಟೋಬರ್ ತಿಂಗಳು ಆರ್ಥಿಕತೆ ಹಾಗೂ ಸಮುದಾಯ ಅಭಿವೃದ್ಧಿಯ ತಿಂಗಳಾಗಿದ್ದು ಯುವ ಜನತೆಗೆ ಉದ್ಯೋಗಾವಕಾಶದ ಬಗ್ಗೆ ಅರಿವು ಮತ್ತು ಪ್ರೇರಣೆಯನ್ನು ನೀಡುವಲ್ಲಿ ರೋಟರಿ ಸಂಸ್ಥೆಗಳು ಅಗತ್ಯ ಕಾರ್ಯಾಗಾರಗಳನ್ನು ನಡೆಸಿ ಜನಸಮುದಾಯಕ್ಕೆ ಒಂದು ಉತ್ತಮ ಉಡುಗೊರೆಯನ್ನು ನೀಡಲಿ ಎಂದು ಹಾರೈಸುತ್ತೇನೆ.

ಧನ್ಯವಾದಗಳೊಂದಿಗೆ.....

**ರೊ. ಡಾ. ಅನುಲೇಖ ಬಾಯರಿ.**

## ವಾರದ ಸಭೆಯ ವರದಿ

ತಾ. 03–10–2024ರ ವಾರದ ಸಭೆಯು ಕ್ಲಬ್ ಅಸೆಂಬ್ಲಿ ಆಗಿದ್ದು, ಶಿವಪ್ರಸಾದ್ ಗ್ರಾಂಡ್‌ನಲ್ಲಿ ಕ್ಲಪ್ತ ಸಮಯದಲ್ಲಿ ಆರಂಭಗೊಂಡಿತು. ಸಭೆಯು ರೊ. ಡಾ. ಅನುಲೇಖ ಬಾಯರಿಯವರ ಪ್ರಾರ್ಥನೆಗೀತೆಯೊಂದಿಗೆ ಪ್ರಾರಂಭಗೊಂಡಿತು. ಕಾರ್ಯದರ್ಶಿಯವರ ಆಗಮನ ತುಸು ವಿಳಂಬವಾದ ಹಿನ್ನಲೆಯಲ್ಲಿ ರೊ. ಕೆ. ಕೆ. ಕಾಂಚನ್‌ರವರು ವಾರದ ವರದಿಯನ್ನು ಸಭೆಗೆ ವಾಚಿಸಿದರು. ರೊ. ಸತ್ಯನಾರಾಯಣ ಪುರಾಣಿಕರು ವಾರದ ಚಿಂತನೆಯಲ್ಲಿ ಪರೋಪಕಾರವನ್ನು ಮಾಡುತ್ತಾ ಎಲ್ಲರಲ್ಲೂ ಸ್ನೇಹಭಾವನೆಯನ್ನು ಹೊಂದಿ ಎಲ್ಲರೊಂದಿಗೆ ಅನ್ಯೋನ್ಯವಾಗಿ ಬಾಳಿದಾಗ ಸುಖ ಶಾಂತಿ ನೆಮ್ಮದಿ ದೊರಕಿ ಭೂಲೋಕವೇ ಸ್ವರ್ಗವಾಗಿರುತ್ತದೆ ಎಂಬ ವಿಷಯವನ್ನು ಒಂದು ಕಥೆಯ ಮೂಲಕ ಸಮಂಜಸವಾಗಿ ತಿಳಿಸಿಕೊಟ್ಟರು. ರೊ. ಕೆ. ಕೆ. ಕಾಂಚನ್ ರೋಟರಿ ಮಾಹಿತಿಯನ್ನು ನೀಡಿದರು.

ನಂತರ ಅಧ್ಯಕ್ಷರು ಮುಂದಿನ ತಿಂಗಳಲ್ಲಿ ಅಂದರೆ ನವೆಂಬರ್ 3ರಂದು ನಡೆಯುವ Zonal ಸಾಂಸ್ಕೃತಿಕ ಸ್ಪರ್ಧೆಗಳಿಗೆ ನಮ್ಮ ಕ್ಲಬ್‌ನಿಂದ ಅಣಿಯಾಗಲು ತಯಾರಿಗಳನ್ನು ನಡೆಸುವ ಬಗ್ಗೆ ಸದಸ್ಯರೊಂದಿಗೆ ಚರ್ಚಿಸಿದರು. ವಿವಿಧ ಸ್ಪರ್ಧೆಗಳ ನಿಯಮ ವಿವರಗಳನ್ನು ಚರ್ಚಿಸುತ್ತಾ ಆಯಾಯ ಸ್ಪರ್ಧೆಗಳಿಗೆ ಸೂಕ್ತವಾದ ಸ್ಪರ್ಧಾಳುಗಳಾಗಿ ನಮ್ಮ ಸದಸ್ಯರು ಹಾಗೂ ಅವರ ಕುಟುಂಬ ಸದಸ್ಯರ ಹೆಸರುಗಳನ್ನು ಸೂಚಿಸಿದರು.

ಈ ಮೊದಲೇ ಸೂಚಿಸಿರುವಂತೆ ಆಯಾಯ ಸ್ಪರ್ಧೆಗಳ Coordinatorಗಳಿಗೆ ಅವರ ಜವಾಬ್ದಾರಿ ನೆನಪಿಸಿ ಜವಾಬ್ದಾರಿಗಳನ್ನು ವಹಿಸಿದರು. ಸ್ಪರ್ಧೆಯ ಪೂರ್ವ ತಯಾರಿ, ತರಬೇತಿ, ಅದಕ್ಕೆ ಎಲ್ಲರಿಗೂ ಅನುಕೂಲವಾಗುವ ತರಬೇತಿ ನೀಡುವ ಸ್ಥಳ, ಸಮಯ, ಖರ್ಚುವೆಚ್ಚಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಗಿ ಒಂದು ಹಂತದ ಕೊನೆಯ ಕರಡು ಪಟ್ಟಿಯನ್ನು ರಚಿಸಲಾಯಿತು ಹಾಗೂ ಈ ಮೂಲಕ ಎಲ್ಲಾ ಸದಸ್ಯರು ಪಾಲ್ಗೊಳ್ಳುವಂತೆ ಕೇಳಿಕೊಂಡರು.

ರೊ. ಡಾ. ಅನುಲೇಖ ಬಾಯರಿ ಲಕ್ಕಿ ರೊಟೇರಿಯನ್ ಆಗಿ ಮೂಡಿಬಂದರು. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ ಧನ್ಯವಾದ ಸಮರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಸಮಾಪ್ತಿಗೊಳಿಸಿ ಮುಂದಿನ ವಾರಕ್ಕೆ ಸಭೆಯನ್ನು ಕಾಯ್ದಿರಿಸಲಾಯಿತು.








## ಸ್ವಚ್ಛತಾ ಅಭಿಯಾನ




ತಾ. 2/10 2024ರಂದು ಗಾಂಧಿ ಜಯಂತಿ ಪ್ರಯುಕ್ತ ರೋಟರಿ ಕ್ಲಬ್‌ನ ಡಿಸ್ಟ್ರಿಕ್ಟ್ ಪ್ರಾಜೆಕ್ಟ್‌ನಲ್ಲಿ ಒಂದು ಪ್ರಾಜೆಕ್ಟ್ ಆಗಿರುವ ಸ್ವಚ್ಛತಾ ಇದರ ಅಡಿಯಲ್ಲಿ ಅಂಗ ಸಂಸ್ಥೆಯಾದ RCC ಹಾಗೂ ಕ್ಯಾಥೊಲಿಕ್ ಸಭಾ ತಲ್ಲೂರು ಘಟಕದವರೊಂದಿಗೆ ಬೆಳಿಗ್ಗೆ 7.30ಕ್ಕೆ ತಲ್ಲೂರು ಕುಂತಿಯಮ್ಮ ದೇವಸ್ಥಾನದಿಂದ ಆರಂಭಿಸಿ, ರಾಷ್ಟ್ರೀಯ ಹೆದ್ದಾರಿಯ ತನಕ ರಸ್ತೆಯ ಇಕ್ಕೆಲಗಳಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಳಲಾಯಿತು. ಕ್ಲಬ್ ಅಧ್ಯಕ್ಷರಾದ ರೊ. ಜುಡಿತ್ ಮೆಂಡೋನ್ಸಾ ಹಾಗೂ ಸದಸ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.






ತಾ. 02/10/2024ರಂದು ಗಾಂಧೀಜಿ ಹಾಗೂ ಶಾಸ್ತ್ರೀಜಿ ಜನ್ಮದಿನದ ಪ್ರಯುಕ್ತ ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಹಾಗು RCC ತಲ್ಲೂರು ವತಿಯಿಂದ ಜಯರಾಣಿ ವೃದ್ಧಾಶ್ರಮಕ್ಕೆ ಅಗತ್ಯ ದಿನಸಿ ಸಾಮಾಗ್ರಿಗಳನ್ನು ನಮ್ಮ ಕ್ಲಬ್‌ನ ಅಧ್ಯಕ್ಷರು ಹಾಗೂ ಸದಸ್ಯರ ಉಪಸ್ಥಿತಿಯಲ್ಲಿ ಹಸ್ತಾಂತರಿಸಲಾಯಿತು.

### Rotary Information

1978ರಲ್ಲಿ RI Board 3H ಕಾರ್ಯಕ್ರಮ ಅಂದರೆ Health, Hunger, Humanity ಎಂಬ ಯೋಜನೆ ಆರಂಭಿಸಿತು. Health ಯೋಜನೆಯಡಿ 1985ರಲ್ಲಿ Polio Plus ಯೋಜನೆ ಆರಂಭವಾಯಿತು. ಇದು ಅತ್ಯಂತ ದೊಡ್ಡ Community Health Project ಆಗಿರುತ್ತದೆ.

ನೀಡಿದವರು : **ರೊ. ಕೆ. ಕೆ. ಕಾಂಚನ್**



Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95



Rtn. K. T. Surendranath 1995-96


Rtn. B. C. Somayaji 1997-98

Rtn. S. Subraya Halambi 1999-2000

Rtn. K. Seetharama Nackathaya 2001-02

Rtn. Dr. Umesh Puthran 2003-04

Rtn. A. Shantharam Pai 2005-06



Rtn. S. Sadananda Chatra 1996-97

Rtn. K. Suresh Kamath 1998-99

Rtn. S. Vijaya Shetty 2000-01

Rtn. U. S. Shenoy 2002-03

Rtn. Dr. B. V. Udupa 2004-05

Rtn. K. Shantharam Prabhu 2006-07

## ಹುಟ್ಟುಹಬ್ಬದ ಶುಭಾಶಯಗಳು



**ರೊ. ಮಹೇಂದ್ರ ಶೆಟ್ಟಿ**
**ದಿನಾಂಕ : ಅಕ್ಟೋಬರ್ 13**
**ಮೊಬೈಲ್ : 9008444559**



**ರೊ. ಜೆರಾಲ್ಡ್ ಕ್ರಾಸ್ತಾ**
**ದಿನಾಂಕ : ಅಕ್ಟೋಬರ್ 14**
**ಮೊಬೈಲ್ : 9880219948**




## ಕಳೆದ ವಾರದ ಚಿಂತನೆ

### ಸ್ವರ್ಗ ಇಲ್ಲೇ ಇದೆ


ಒಬ್ಬ ನಿಷ್ಠಾವಂತ ಧರ್ಮಿಷ್ಠ ತನ್ನ ಜೀವಿತ ಕಾಲದಲ್ಲಿ ಯಾರಿಗೂ ತೊಂದರೆ ನೀಡದೇ ತನ್ನಷ್ಟಕ್ಕೆ ತಾನು ನಿಯಮಾನುಸಾರ ಧರ್ಮ ಕಾರ್ಯ ನಡೆಸುತ್ತಾ ಬಾಳಿ, ಕೊನೆಗೊಂದು ದಿನ ಇಹಲೋಕ ತ್ಯಜಿಸುತ್ತಾನೆ... ಯಮನ ಭಂಟರು ಈತನನ್ನು ಯಮಲೋಕಕ್ಕೆ ಎಳೆದೊಯ್ಯುವಾಗ, ಈತ ಆ ಕಡೆ – ಈ ಕಡೆ ಹುಡುಕಾಟ ಮಾಡುತ್ತಾನೆ. ಭಂಟ ಇವನಲ್ಲಿ ಏನು ಹುಡುಕಾಟ ಎಂದು ಕೇಳಿದಾಗ, ಈತ ತಾನು ಭೂಲೋಕದಲ್ಲಿ ಸನ್ನಡತೆಯ ಧರ್ಮದೊಂದಿಗೆ ಬದುಕಿದ್ದು, ಈಗ ಸಿಗುವ ಸ್ವರ್ಗ ಹೇಗಿದೆ? ಎಲ್ಲಿದೆ? ಎಂದು ನೋಡುತ್ತಿದ್ದೇನೆ ಎಂದನು. ಅದಕ್ಕೆ ಭಂಟ ಭೂಲೋಕದಲ್ಲಿ ಯಥೇಚ್ಛ ಗಾಳಿ, ಬೆಳಕು, ನೀರು, ನದಿ, ಪರ್ವತ, ಸಮುದ್ರ, ಗಿಡಮರ, ಪ್ರಾಣಿಪಕ್ಷಿ ಅಲ್ಲದೇ ನಿನಗೆ ಯೋಚಿಸುವ ಬುದ್ದಿ ಎಲ್ಲಾ ಕೊಟ್ಟರೂ, ಅಲ್ಲಿ ಸ್ವರ್ಗ ಕಾಣದ ನಿನಗೆ ಇಲ್ಲಿ ಏನೂ ಇಲ್ಲ ಎಂದನಂತೆ.

ಸ್ವರ್ಗ ಇನ್ನೆಲ್ಲಿಯೂ ಇರದೇ, ನೀವು ಇದ್ದಲ್ಲೇ ಸ್ವರ್ಗವನ್ನು ಕಾಣಬೇಕು.. ಮತ್ತು ಅನುಭವಿಸಬೇಕು... **ನೀಡಿದವರು : ರೊ. ಸತ್ಯನಾರಾಯಣ ಪುರಾಣಿಕ್**

ಒಳಿತಿಗೆಲ್ಲಿದೆ
ಜಗದಿ ಉಳಿವು....?
ಬಾಳಬೇಕಿಲ್ಲಿ ನುಂಗಿ
ಎಲ್ಲದರ ನೋವು?
ಅದಕೇ...
ಕೊಳ್ಳಿಗೆ ಕಾಯ್ವ
ಶವಕೇ ಹೆಚ್ಚು
ಬೀಳುವುದು
ಹಾರ ತುರಾಯಿ
ಹೂವು...॥

**– ರೂಪಕ್ ನಾಗರಾಜ್**



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24

*This Bulletin is sponsored by :*
**Rtn. K. K. Kanchan**
**Mob. : 9448328632**

For Private Circulation only